# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ -153 ಜಯನಗರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಜಯನಗರ ವಾರ್ಡ್-153 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ವರಲಕ್ಷಮ್ಮ ಎಲ್. ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:21/05/2022 ಶನಿವಾರದಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಯನ್ನು ನಡೆಸಲಾಯಿತು.

ಹಾಜರಿದ್ದವರು:-

1. ಶ್ರೀಮತಿ. ವರಲಕ್ಷಮ್ಮ ಎಲ್. ನೋಡಲ್ ಅಧಿಕಾರಿ ರವರು.
2. ಶ್ರೀ. ನವೀನ್‌ಕುಮಾರ್ ಕೆ. ಕಾರ್ಯದರ್ಶಿ.
3. ಶ್ರೀ. ಶ್ರೀಜಾ, ಸಹಾಯಕ ಅಭಿಯಂತರರು, ವಿದ್ಯುತ್ (ದಕ್ಷಿಣ).
4. ಶ್ರೀ. ರವೀಂದ್ರ ಹಿಜೇರಿ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-153.
5. ಶ್ರೀ. ವಿಜಯಕುಮಾರ್, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-153
6. ಶ್ರೀ. ಶ್ರೇಯಸ್, ಸಹಾಯಕ ಅಭಿಯಂತರರು, ವಿದ್ಯುತ್.
7. ಶ್ರೀ. ಪ್ರಕಾಶ್ ಕೆ., ಕಿರಿಯ ಅಭಿಯಂತರರು BESCOM.
8. ಶ್ರೀ. ವಿಜಯಕುಮಾರ್ ಜಿ. ಕಿರಿಯ ಅಭಿಯಂತರರು BESCOM.
9. ಶ್ರೀ. ಮಲ್ಲಿಕಾರ್ಜುನ ಗೌಡ, ಜಲ ಪರಿವೀಕ್ಷಕರು BWSSB.
10. ಶ್ರೀ. ಜಯಕುಮಾರ್ ಎ.ಎಸ್.ಐ ಜಯನಗರ ಸಂಚಾರ ಪೊಲೀಸ್ ಠಾಣೆ.
11. ಶ್ರೀ. ಅನೀಸ್ ಅಹಮದ್, ಶ್ರೀ. ಫಜಲ್ ಖಾನ್, ಡಾ|| ರಘುನಾಥ್, ಶ್ರೀ. ಕಮಲ್ ಕಬೀರ್ ಮತ್ತು ಶ್ರೀ. ಮೊಹಮ್ಮದ್ ಸಲಾವುದ್ದೀನ್ (ಸಾರ್ವಜನಿಕರು).

ಸಭೆಗೆ ಗೈರು ಹಾಜರಾದ ಇಲಾಖೆಗಳು:-

1. ಅರಣ್ಯ ಇಲಾಖೆಯ ಅಧಿಕಾರಿಗಳು.
2. ಪೊಲೀಸ್ ಇನ್ಸ್‌ಪೆಕ್ಟರ್ ಮೈಕೋಲೇಔಟ್ & ಬಸವನಗುಡಿ ಸಂಚಾರ ಪೊಲೀಸ್ ಠಾಣೆ.
3. ಪೊಲೀಸ್ ಇನ್ಸ್‌ಪೆಕ್ಟರ್, ಸಿದ್ದಾಪುರ, ತಿಲಕ್‌ನಗರ ಮತ್ತು ಬಸವನಗುಡಿ ಕಾನೂನು ಸುವ್ಯವಸ್ಥೆ.
4. ತೋಟಗಾರಿಗೆ ಇಲಾಖೆ.

*********



Scanned with CamScanner

1. ವಾರ್ಡ್–153 ರ ಕುಂದು ಕೊರತೆಗಳ ಬಗ್ಗೆ ಚರ್ಚಿಸುವ ಸಂಬಂಧ ದಿನಾಂಕ:21/05/2022 ಮಂಗಳವಾರದಂದು ಬೆಳಗ್ಗೆ 11.00 ಗಂಟೆಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

2. ನೋಡಲ್ ಅಧಿಕಾರಿಯವರು ಮಾತನಾಡಿ ಸಭೆಯಲ್ಲಿ ಹಾಜರಿದ್ದ, ಹಿರಿಯ ಆರೋಗ್ಯ ಪರಿವೀಕ್ಷರು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ವಾರ್ಡ್ ವ್ಯಾಪ್ತಿಯಲ್ಲಿ ಕಸ ವಿಂಗಡಣೆ ಮತ್ತು ತೆರವು ಕಾರ್ಯಾಚರಣೆ ಕುರಿತಂತೆ ಪ್ರಸ್ತಾಪಿಸಿ ಸಾರ್ವಜನಿಕರಲ್ಲಿ ಕಸ ವಿಂಗಡಣೆಯ ಕುರಿತು ಅರಿವು ಮೂಡಿಸುವ ಬಗ್ಗೆ ಪ್ರತಿದಿನ ಆಟೋಗಳಲ್ಲಿ ಪ್ರಚಾರ ಪಡಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು. ಹಾಗೂ ಲಿಂಗ್ ವರ್ಕರ್ಸ್‌ಗಳನ್ನು ಮನೆ–ಮನೆಗೆ ಹೋಗಿ ಈ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಸಹ ಕ್ರಮ ಕೈಗೊಳ್ಳುವಂತೆ ಹಾಗೂ ಹಾಲಿ ಮಳೆ ಬೀಳುತ್ತಿರುವ ಕಾರಣ, ರಸ್ತೆ ಮತ್ತು ಮೋರಿಗಳಲ್ಲಿ ನೀರು ನಿಲ್ಲುತ್ತಿದ್ದು, ಇದರಿಂದ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗುತ್ತಿರುವುದರಿಂದ ಔಷದಿ ಸಿಂಪಡಿಸುವಂತೆಯೂ ಸಹ ತಿಳಿಸಿದರು.

ಕ್ರಮ : ಹಿ.ಆ.ಪ & ಕಿ.ಆ.ಪ

3. ವಾರ್ಡಿನ ಸ್ಥಳೀಯರಾದ ಅನೀಸ್ ಅಹಮದ್ ಮತ್ತು ಫಜಲ್ ಖಾನ್ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್ ಮತ್ತು ಎಸ್.ಆರ್.ಕೆ ಗಾರ್ಡನ್ ವ್ಯಾಪ್ತಿಯ ಕೆಲವು ಕಡೆಗಳಲ್ಲಿ ಸ್ಟ್ರೀಟ್ ಲೈಟ್ ವರ್ಕ್ ಆಗುತ್ತಿಲ್ಲ. ಸಂಬಂಧಪಟ್ಟವರು ಬಂದರೆ ಸದರಿ ಜಾಗಗಳನ್ನು ತೋರಿಸುವುದಾಗಿ ಸಭೆಗೆ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸ್ಟ್ರೀಟ್ ಲೈಟ್ ಸಂಬಂಧಿಸಿದಂತೆ, ಶ್ರೀ. ಮೂರ್ತಿ ರವರಿಗೆ ಈಗಾಗಲೇ ಮಾನ್ಯ ವಲಯ ಆಯುಕ್ತರು (ದಕ್ಷಿಣ) ರವರು ಕೂಡಲೇ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಸ.ಕಾ.ನಿ.ಅ (ವಿದ್ಯುತ್) ರವರು ಅಗತ್ಯ ಕ್ರಮ ಕೈಗೊಳ್ಳುವುದು. ಮುಂದುವರೆದಂತೆ ವಾರ್ಡ್ ಅಭಿಯಂತರರು ಮಾತನಾಡಿ ಆರ್.ವಿ. ರಸ್ತೆಯಲ್ಲಿಯೂ ಸಹ ಸ್ಟ್ರೀಟ್ ಲೈಟ್ ಇಲ್ಲದ ಕಾರಣ ರಾತ್ರಿ ವೇಳೆಯಲ್ಲಿ ಅನಧಿಕೃತವಾಗಿ ಟ್ರ್ಯಾಕ್ಟರ್ ಮತ್ತು ಲಾರಿಗಳಲ್ಲಿ ಕಟ್ಟಡದ ಅವಶೇಷಗಳನ್ನು ತಂದು ಸುರಿಯುತ್ತಿರುತ್ತಾರೆ. ಆದ್ದರಿಂದ ಸದರಿ ರಸ್ತೆಗೆ ಕೂಡಲೇ ಸ್ಟ್ರೀಟ್ ಲೈಟ್ (ವಿದ್ಯುತ್ ದೀಪ) ಗಳನ್ನು ಕೂಡಲೇ ಅಳವಡಿಸಿದ್ದಲ್ಲಿ ಈ ಸಮಸ್ಯೆ ಬಗೆ ಹರಿಯುವುದೆಂದು ಸಭೆಗೆ ತಿಳಿಸಿದರು.

ಕ್ರಮ : ಕಾರ್ಯಪಾಲಕ ಅಭಿಯಂತರರು (ವಿದ್ಯುತ್–ದಕ್ಷಿಣ)



Scanned with CamScanner

4. ಬೆಸ್ಕಾಂ ಇಲಾಖೆಯ ಅಭಿಯಂತರರಾದ ಶ್ರೀ. ವಿಜಯ್‌ಕುಮಾರ್ ರವರು ಮಾತನಾಡಿ 9ನೇ ಮುಖ್ಯರಸ್ತೆ, ಕುಚಲಾಂಬಾಳ್ ಕಲ್ಯಾಣ ಮಂಟಪದ ಬಳಿ ಇದ್ದ ಟ್ರಾನ್ಸ್‌ಫಾರಂ ಅನ್ನು ನಾವು ಸಿಂಗಲ್ ಪೋಲ್ ಟ್ರಾನ್ಸ್‌ಫಾರಂ ಅನ್ನಾಗಿ ಪರಿವರ್ತಿಸುತ್ತೇವೆ. ಹಾಲಿ ಸದರಿ ಜಾಗದಲ್ಲಿ ಸಾರ್ವಜನಿಕರು ಮೂತ್ರ ವಿಸರ್ಜನೆ ಮಾಡುತ್ತಿದ್ದು ಹಾಗೂ ಕಸಗಳನ್ನು ಸಹ ಸುರಿಯುತ್ತಿದ್ದು, ಆ ಪ್ರದೇಶ ಹಾಳಾಗಿರುತ್ತದೆ. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಗೆ ತಿಳಿಸಿದರು. ನಂತರ ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಪ್ರಸ್ತಾಪಿತ ಜಾಗದಲ್ಲಿ ಹೊಸದಾಗಿ ಶೌಚಾಲಯ ನಿರ್ಮಿಸಿದ್ದಲ್ಲಿ ಸದರಿ ಜಾಗದಲ್ಲಿ ಮೂತ್ರ ವಿಸರ್ಜನೆ ಸಮಸ್ಯೆಯನ್ನು ತಡೆಗಟ್ಟಬಹುದಾಗಿರುತ್ತದೆಂದು ಸಭೆಗೆ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ವಾರ್ಡ್ ಅಭಿಯಂತರರಿಗೆ ಸದರಿ ಜಾಗವನ್ನು ಪರಿಶೀಲಿಸಿ ಆ ಜಾಗದಲ್ಲಿ ಶೌಚಾಲಯ ನಿರ್ಮಿಸಬಹುದೇ ಎಂಬುದರ ಬಗ್ಗೆ ಪ್ರಸ್ತಾವನೆಯನ್ನು ತಮ್ಮ ಮೇಲಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು.

ಕ್ರಮ : ಸ.ಕಾ.ನಿ.ಅ (ಹೊಂಬೇಗೌಡನಗರ),

5. ವಾರ್ಡ್ 153ರ ಸ್ಥಳೀಯರಾದ ಮೊಹಮ್ಮದ್ ಸಲಾವುದ್ದೀನ್ ರವರು ಮಾತನಾಡಿ ಕಳೆದ ಸಭೆಯಲ್ಲಿ ಬಿ.ಹೆಚ್.ಇ.ಎಲ್ ಲೇಔಟ್‌ನಲ್ಲಿರುವ ಪಾರ್ಕ್‌ಗೆ ಸಂಬಂಧಿಸಿದಂತೆ ಚರ್ಚಿಸಲಾಗಿರುವ ವಿಷಯಗಳ ಕುರಿತು ಕೈಗೊಂಡಿರುವ ಕ್ರಮದ ಬಗ್ಗೆ ತಿಳಿಸುವಂತೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ತಾವು ತಿಳಿಸಿರುವ ವಿಷಯಗಳ ಬಗ್ಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ-ದಕ್ಷಿಣ) ರವರಿಗೆ ಪತ್ರ ಬರೆಯಲಾಗಿ ಸದರಿಯವರು ನಮಗೆ ಪತ್ರ ಬರೆದು ಬಿ.ಹೆಚ್.ಇ.ಎಲ್ ಲೇಔಟ್ ಪಾರ್ಕಿನಲ್ಲಿ ಅಳವಡಿಸಿರುವ ಜಿಮ್ ಉಪಕರಣಗಳು ಮತ್ತು ಬೋರ್‌ವೆಲ್ ದುರಸ್ಥಿಯ ಕುರಿತಂತೆ ಇನ್ನು ಒಂದು ತಿಂಗಳೊಳಗಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ ಎಂದು ಸಭೆಗೆ ತಿಳಿಸಿದರು.

ಕ್ರಮ: ಕಾ.ಅ (ಯೋಜನೆ-ದಕ್ಷಿಣ)



Scanned with CamScanner

6. ವಾರ್ಡ್ 153ರ ಸ್ಥಳೀಯರಾದ ಮೊಹಮ್ಮದ್ ಸಲಾವುದ್ದೀನ್ ರವರು ಮಾತನಾಡಿ ಎರಡು ದಿನಗಳ ಹಿಂದೆ ಬಿದ್ದ ಭಾರಿ ಮಳೆಗೆ ಬಿ.ಹೆಚ್.ಇ.ಎಲ್ ಲೇಔಟ್‌ನ ಕೆಲವು ಮನೆಗಳಿಗೆ ನೀರು ನುಗ್ಗಿ ಬಹಳ ಸಮಸ್ಯೆ ಉಂಟಾಗಿರುತ್ತದೆ. ಈ ಬಗ್ಗೆ ವಾರ್ಡ್ ಅಭಿಯಂತರರನ್ನು ಕರೆದು ಸದರಿ ಜಾಗಗಳನ್ನು ತೋರಿಸಲಾಗಿರುತ್ತದೆ. ಹಾಗೂ ಬಿ.ಹೆಚ್.ಇ.ಎಲ್ ಮುಖ್ಯರಸ್ತೆಯಲ್ಲಿರುವ ಮಳೆನೀರು ಮೋರಿಯು ಪೂರ್ತಿ ಬ್ಲಾಕ್ ಆಗಿರುವುದರಿಂದ ಮಳೆ ನೀರು ಸರಾಗವಾಗಿ ಹರಿಯದ ಕಾರಣ ಈ ಸಮಸ್ಯೆ ಉದ್ಭವವಾಗಿರುತ್ತದೆಂದು ಸಭೆಗೆ ತಿಳಿಸಿದರು. ಆದ್ದರಿಂದ ಆದಷ್ಟು ಬೇಗ ಸದರಿ ಮೋರಿಯಲ್ಲಿ ಹೂಳೆತ್ತುವಂತೆ ಕೋರಿದರು. ಹಾಗೂ ಬಿ.ಹೆಚ್.ಇ.ಎಲ್ ಲೇಔಟ್ ಸುತ್ತಮುತ್ತ ಸೊಳ್ಳೆ ಔಷದಿ ಸಿಂಪಡಿಸುವಂತೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ವಾರ್ಡ್ ಅಭಿಯಂತರರಿಗೆ ಸದರಿ ಮೋರಿಯ ಹೂಳೆತ್ತುವ ಕಾರ್ಯವನ್ನು ಆದಷ್ಟು ಬೇಗ ಕೈಗೊಳ್ಳಲು ತಿಳಿಸಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಇಂದು ಜೆ.ಸಿ.ಬಿಯನ್ನು ಬಿಟ್ಟು ಸದರಿ ಮೋರಿಯಲ್ಲಿರುವ ಹೂಳನ್ನು ತೆಗೆಯುತ್ತಿರುವುದಾಗಿ ಸಭೆಗೆ ತಿಳಿಸಿದರು. ನಂತರ ಔಷದಿ ಸಿಂಪಡಿಸುವ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಕ್ರಮ ಕೈಗೊಳ್ಳುವಂತೆ ನೋಡಲ್ ಅಧಿಕಾರಿಯವರು ತಿಳಿಸಿದರು.

**ಕ್ರಮ: ವಾರ್ಡ್ ಅಭಿಯಂತರರು, ಹಿರಿಯ ಆರೋಗ್ಯ ಪರಿವೀಕ್ಷಕರು**

7. BWSSB ಅಭಿಯಂತರರಾದ ಶ್ರೀಮತಿ. ಶ್ರೀಜಾ ರವರು ಮಾತನಾಡಿ ಮಾಧವನ್ ಪಾರ್ಕ್ ಬಳಿ ಇರುವ ಪಂಪ್‌ಹೌಸ್ ಮೇಲೆ ಮರದ ಕೊಂಬೆ ಬಾಗಿರುವುದರಿಂದ ಕಟ್ಟಡಕ್ಕೆ ತೊಂದರೆಯಾಗುತ್ತಿರುತ್ತದೆ. ಆದ್ದರಿಂದ ಸದರಿ ಮರದ ಕೊಂಬೆಯನ್ನು ಕತ್ತರಿಸುವಂತೆ ಸಭೆಗೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಅರಣ್ಯಾಧಿಕಾರಿಯವರಿಗೆ ಪತ್ರ ಬರೆದು ಸದರಿ ಕೊಂಬೆಯನ್ನು ಕತ್ತಿರಿಸುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಪತ್ರ ಬರೆಯಲು ವಾರ್ಡ್ ಅಭಿಯಂತರರಿಗೆ ತಿಳಿಸಿದರು.

**ಕ್ರಮ : ವಾರ್ಡ್ ಅಭಿಯಂತರರು,**

8. ವಾರ್ಡ್ 153ರ ಸ್ಥಳೀಯರಾದ ಡಾ॥ ರಘುನಾಥ್ ರವರು ಮಾತನಾಡಿ ಇನ್ನುಮುಂದೆ ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ಕೈಗೊಳ್ಳುವ ಕಾಮಗಾರಿಗಳ ಕುರಿತು ಮತ್ತು ಸದರಿ ಕಾಮಗಾರಿಗೆ ತಯಾರಿಸಿರುವ ಅಂದಾಜು ಪಟ್ಟಿ, ಸದರಿ ಕಾಮಗಾರಿಯ ಟೆಂಡರ್ ಅನುಮೋದನೆ ಆಗಿರುವುದು ಮತ್ತು ಕೆಲಸದ ಪ್ರಗತಿ ಹಾಗೂ ಕಾಮಗಾರಿಗೆ ತಗಲಿರುವ ವೆಚ್ಚಗಳ ಕುರಿತಂತೆ ಮಾಹಿತಿಯನ್ನ ವಾರ್ಡ್ ಸಮಿಸಿ ಸಭೆಯ ಗಮನಕ್ಕೆ ತರುವಂತೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ವಾರ್ಡ್ ಅಭಿಯಂತರರಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

**ಕ್ರಮ : ವಾರ್ಡ್ ಅಭಿಯಂತರರು**



Scanned with CamScanner

9. ವಾರ್ಡ್ 153ರ ಸ್ಥಳೀಯರಾದ ಡಾ॥ ರಘುನಾಥ್ ರವರು ಮಾತನಾಡಿ ಶ್ರೀ. ಮೂರ್ತಿ, ಇಂಜಿನಿಯರ್ ವಿದ್ಯುತ್–ದಕ್ಷಿಣ ರವರು ಪ್ರಾಮಾಣಿಕವಾಗಿ ಮತ್ತು ಶೀಘ್ರವಾಗಿ ದೂರುಗಳಿಗೆ ಸ್ಪಂದಿಸುತ್ತಿರುವುದಾಗಿ ಪ್ರಶಂಸೆ ವ್ಯಕ್ತಪಡಿಸಿದಿರು. ಮತ್ತು ಜಯನಗರ ಸಂಚಾರ ಪೊಲೀಸ್ ಠಾಣೆ ಸಿಬ್ಬಂದಿ ವರ್ಗದರವರು ದೂರುಗಳಿಗೆ ಸ್ಪಂದಿಸುತ್ತಿರುವುದಾಗಿಯೂ ಸಹ ತಿಳಿಸಿದರು.

10. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2022–23ನೇ ಸಾಲಿನ ಆಯವ್ಯಯದಲ್ಲಿ ಪ್ರತಿ ವಾರ್ಡಿಗೆ ಚರಂಡಿ ಹಾಗೂ ಪಾದಚಾರಿ ಮಾರ್ಗಗಳ ದುರಸ್ಥಿಗಾಗಿ ಹಾಗೂ ವಾರ್ಷಿಕ ನಿರ್ವಹಣೆಗಾಗಿ ರೂ. 30.00 ಲಕ್ಷಗಳ ಅನುದಾನವನ್ನು ಮೀಸಲಿರಿಸಿದ್ದು, ಅದರಂತೆ ವಾರ್ಡ್ ಸಂಖ್ಯೆ: 153ರಕ್ಕೆ ಸಂಬಂಧಿಸಿದಂತೆ **(Name of Work:** Annual Maintenance and Improvements of footpath and drains in Ward 153 Jayanagar, **30.00 Lakhs)** ಈ ಕಾಮಗಾರಿಯನ್ನು ವಾರ್ಡ್ ಸಮಿತಿ ಸಭೆಯಲ್ಲಿ ಮಂಡಿಸಲಾಗಿದ್ದು, ಸರ್ವಾನುಮತದಿಂದ ಸಭೆಯ ಅನುಮೋದನೆ ಪಡೆಯಲಾಯಿತು.

ಮೇಲಿನ ಎಲ್ಲಾ ಅಂಶಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಹಾಜರಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ತಿಳಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಗೈರುಹಾಜರಾಗಿರುವ ಇತರೆ ಇಲಾಖೆಯವರು ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ತಿಳಿಸುತ್ತಾ ಸಭೆ ಮುಕ್ತಾಯಗೊಳಿಸಲಾಯಿತು.

(ನವೀನ್‌ಕುಮಾರ್ ಕೆ.)
ಕಾರ್ಯದರ್ಶಿ
ವಾರ್ಡ್–153 ಜಯನಗರ

(ವರಲಕ್ಷ್ಮಮ್ಮ ಎಲ್) 21/5/22
ನೋಡಲ್ ಅಧಿಕಾರಿ
ವಾರ್ಡ್–153 ಜಯನಗರ



Scanned with CamScanner